೧೦ಳ ಲಕ್ಷ ಮರಿಗಳು ಉತ್ಪಾದನೆ ಈ ಐದು ಕೆರೆಗಳಿಂದ ಆಗುತ್ತದೆಂದು ಹೇಳಿದ್ದೇನೆ. ತಾವು ಕೇಳಿದ ಎಲ್ಲ ಪ್ರಶ್ನೆಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಬಿಡುಗಡೆಯಾಗಿರುವ ಹಣವೆಲ್ಲ ಖರ್ಚಾಗಿಲ್ಲ. ಬಿಡುಗಡೆಯಾಗಿರುವ ಹಣವೇ ಬೇರೆ, ಖರ್ಚಾಗಿರುವ ಹಣವೇ ಬೇರೆ.

ಶ್ರೀ ವಸಂತ ವಿ. ಸಾಲಿಯಾನ.—ತಾವು ಅದಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆಯನ್ನು ಕೇಳಿದರೆ ನಾನು ಸರಿಯಾದ ಉತ್ತರವನ್ನು ಕೊಡುತ್ತೇನೆ. ಏತಕ್ಕೆಂದರೆ ತಾವು ಕೇಳಿದಂತೆ ಪ್ರಶ್ನೆಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಷ್ಟು ಉತ್ಪಾದನಾ ಕೇಂದ್ರಗಳಿಗೆ, ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂಬುದನ್ನು ಹೇಳಿದ್ದೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಬಿಡುಗಡೆಯಾಗಿರುವ ಹಣ ಬೇರೆ, ಖರ್ಚಾದ ಹಣ ಬೇರೆ. ಹಣ ನೀವು ಬಿಡುಗಡೆ ಮಾಡಿರುವುದು ೧೪೦ ಲಕ್ಷ ರೂಪಾಯಿಗಳು. ಇದರಲ್ಲಿ ಖರ್ಚು ಎಷ್ಟಾಗಿದೆ ಎನ್ನುವ ಸರಳವಾದ ಪ್ರಶ್ನೆಗೆ ಉತ್ತರವನ್ನು ಕೊಡದಿದ್ದರೆ ಏನು ಮಾಡಲಿ.

ಶ್ರೀ ವಸಂತ ವಿ. ಸಾಲಿಯಾನ. ಮಾನ್ಯ ಅಧ್ಯಕ್ಷರೇ, ಇನ್ನೊಂದು ಸಲ ನಾನು ಹೇಳುತ್ತಿದ್ದೇನೆ, ೧೩೭ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ೫ ಕೆರೆಗಳಿಗೆ ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶಿಗ್ಗಾಂವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

೨೭೬. (೭೮೦) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಶಿಗ್ಗಾಂವ ಆಸ್ಪತ್ರೆ ಪಿ.ಹೆಚ್.ಸಿ.ಯಿಂದ ಸಿ.ಹೆಚ್.ಸಿ.ಗಾಗಿ ಯಾವಾಗ ಪರಿವರ್ತನೆ ಆಗಿದೆ ?

ಆ) ಸಮುದಾಯ ಆರೋಗ್ಯ ಕೇಂದ್ರಕ್ಕೆ ಒದಗಿಸುವ ವೈದ್ಯಾಧಿಕಾರಿಗಳ ಸಿಬ್ಬಂದಿ ಒದಗಿಸಲಾಗುವುದೇ ?

ಇ) ಹಾಗಿದ್ದರೆ ಇನ್ನೂ ಎಷ್ಟು ದಿವಸಗಳಲ್ಲಿ ಒದಗಿಸಲಾಗುವುದು ?

ಈ) ಶಿಗ್ಗಾಂವ ಆಸ್ಪತ್ರೆಯನ್ನು ೭೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಮಾನ್ಯ ಜಿಲ್ಲಾ ಪಂಚಾಯತ್ ಧಾರವಾಡದಿಂದ ಶಿಫಾರಸ್ಸು ಮಾಡಲಾಗಿದೆಯೆ ?

ಉ) ಹಾಗಿದ್ದಲ್ಲಿ ಇನ್ನೂ ಎಷ್ಟು ದಿವಸಗಳಲ್ಲಿ ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ದಿನಾಂಕ ೧೬-೧-೯೯ರ ಸರ್ಕಾರದ ಆಜ್ಞೆಯಲ್ಲಿ ಪರಿವರ್ತನೆ ಆಗಿದೆ.

ಆ) ಒದಗಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಎಪ್ಪತ್ತು ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಜಿಲ್ಲಾಪರಿಷತ್ತಿನಿಂದ ಸರ್ಕಾರಕ್ಕೆ ಇನ್ನೂ ಬಂದು ಸೇರಿಲ್ಲ.

ಉ) ೫೦ ಹಾಸಿಗೆಗೆ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರ ಪರಿಶೀಲಿಸುತ್ತಿದೆ. ಕಾಲಮಿತಿಯನ್ನು ನೀಡಲಾಗದು.

ಶ್ರೀ ಮಂಜುನಾಥ ಸಿ. ಕುನ್ನೂರ.—ಮಾನ್ಯ ಅಧ್ಯಕ್ಷರೆ, ಶಿಗ್ಗಾಂವ ಆಸ್ಪತ್ರೆ ಪಿ. ಎಚ್. ಸಿ. ಯಿಂದ ಸಿ. ಎಚ್. ಸಿ. ಯಾಗಿ ಯಾವಾಗ ಪರಿವರ್ತನೆ ಆಯಿತು ಮತ್ತು ಸಮುದಾಯ ಆರೋಗ್ಯ ಕೇಂದ್ರಕ್ಕೆ ಒದಗಿಸುವ ವೈದ್ಯಾಧಿಕಾರಿಗಳ ಸಿಬ್ಬಂದಿಯನ್ನು ಅಲ್ಲಿಗೆ ಒದಗಿಸಲಾಗುವುದೇ ಎಂಬ ಪ್ರಶ್ನೆಗೆ ದಿನಾಂಕ ೧೬ನೇ ಜನವರಿ ೧೯೯೯ರ ಸರ್ಕಾರದ ಆಜ್ಞೆಯಲ್ಲಿ ಪರಿವರ್ತನೆ ಆಗಿದೆ ಮತ್ತು ವೈದ್ಯಾಧಿಕಾರಿ

ಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ೧೯೮೯ ರಿಂದಲೇ ಸಿ. ಎಚ್. ಸಿ. ಆಗಿ ಪರಿವರ್ತನೆ ಆದರೂ ಕೂಡ ಇವತ್ತಿಗೆ ಇಬ್ಬರೇ ವೈದ್ಯಾಧಿಕಾರಿಗಳಿದ್ದಾರೆ. ಸಮುದಾಯ ಆರೋಗ್ಯ ಕೇಂದ್ರಕ್ಕೆ ಬೇಕಾಗುವ ವೈದ್ಯಾಧಿಕಾರಿಗಳು ಯಾರನ್ನೂ ಒದಗಿಸಿಲ್ಲ ಮತ್ತು ಕಟ್ಟಡವನ್ನು ಮಾತ್ರ ಅಲ್ಲಿ ಕಟ್ಟಲಾಗಿದೆಯೆಂಬುದನ್ನು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಸನ್ಮಾನ್ಯ ಸಭಾಧ್ಯಕ್ಷರೆ, ಅಂದಾಜು ಎರಡು ಮೂರು ತಿಂಗಳ ಹಿಂದೆ ಈ ಆಸ್ಪತ್ರೆಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟಾಗ ಮಾನ್ಯ ಸದಸ್ಯರು ಕೂಡ ನನ್ನ ಜೊತೆಯಲ್ಲಿದ್ದರು. ಇಬ್ಬರೇ ವೈದ್ಯರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಿಯಮಾವಳಿ ಪ್ರಕಾರ ಇನ್ನೊಬ್ಬರು ವೈದ್ಯರನ್ನು ಅಲ್ಲಿ ಹಾಕಬೇಕಾಗಿದೆ. ಗುತ್ತಿಗೆ ಆಧಾರದ ಮೇಲೆ ನಾವು ನೇಮಕಾತಿ ಮಾಡಿಕೊಂಡು ಆದಷ್ಟು ಬೇಗ ಅಂದರೆ ಇನ್ನು ೧೫–೨೦ ದಿವಸಗಳಲ್ಲಿ ಹೆಚ್ಚು ಅಂದರೆ ಒಂದು ತಿಂಗಳಲ್ಲಿ ಅಲ್ಲಿ ಇನ್ನೊಬ್ಬರು ವೈದ್ಯರನ್ನು ಹಾಕುವಂಥ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಮಂಜುನಾಥ್ ಸಿ. ಕುನ್ನೂರ್.—ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು ಎಂದು ನಾನು ಕೇಳಿಕೊಂಡಿದ್ದೇನೆ. ಮಾನ್ಯ ಆರೋಗ್ಯ ಸಚಿವರು ೭೦ ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತಿಸುವುದಕ್ಕೆ ಆಗುವುದಿಲ್ಲ. ೫೦ ಹಾಸಿಗೆಗಳ ಆಸ್ಪತ್ರೆಯನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಕಾರಣ ಶಿಗ್ಗಾಂವದಲ್ಲಿ ಇರತಕ್ಕ ಆಸ್ಪತ್ರೆ ಬಹಳ ಉತ್ತಮ ಸ್ಥಿತಿಯಲ್ಲಿರುವುದಿಲ್ಲ. ಕೇವಲ ಇಬ್ಬರೇ ಇಬ್ಬರು ವೈದ್ಯಾಧಿಕಾರಿಗಳು ಅಲ್ಲಿದ್ದಾರೆ, ಶಿಗ್ಗಾಂವಿ ಸುಮಾರು ೨೫ ಸಾವಿರ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕು ಪ್ರದೇಶವಾಗಿದೆ. ಮತ್ತು ಅಲ್ಲಿ ಖಾಸಗಿ ವೈದ್ಯರ ಆಸ್ಪತ್ರೆಗಳು ಕೂಡ ಇಲ್ಲ. ಅದು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಪ್ರದೇಶ. ಆದಕಾರಣ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕೂಡಲೇ ಶಿಗ್ಗಾಂವಿ ಆಸ್ಪತ್ರೆಯನ್ನು ೭೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಿಂದ ನಮ್ಮ ಸರ್ಕಾರಕ್ಕೆ ೩೦ ಹಾಸಿಗೆಯಿಂದ ೫೦ ಹಾಸಿಗೆಗೆ ಏತ್ತರಿಸಲಿಕ್ಕೆ ಮಾತ್ರ ಮನವಿ ಬಂದಿದೆಯೇ ಹೊರತು ೭೦ ಹಾಸಿಗೆಯವರೆಗೆ ಏರಿಸುವುದಕ್ಕೆ ಇನ್ನೂ ಮನವಿ ಬಂದಿಲ್ಲ. ಅಂಥ ಮನವಿ ಬಂದಾಗ ಅದನ್ನು ಕೂಡ ನಾವು ಪರಿಶೀಲಿಸಿ ಮಂಜೂರು ಮಾಡುವಂಥ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್.—ಸನ್ಮಾನ್ಯ ಅಧ್ಯಕ್ಷರೇ, ೫೦ ಹಾಸಿಗೆಯ ಆಸ್ಪತ್ರೆಯನ್ನಾ ದರೂ ತೀವ್ರವಾಗಿ ಮಾಡಿಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅರಣ್ಯಗಳ ಅಭಿವೃದ್ಧಿ

೨೬೦(ಖಿಲಿ) ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರಸಿ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಅರಣ್ಯಾಭಿವೃದ್ಧಿಗಾಗಿ ಇರುವ ಓ. ಡಿ. ಎ, ಸ್ಕೀಮಿಗೆ ಯಾವ ಯಾವ ಜಿಲ್ಲೆಗಳು ಸೇರ್ಪಡೆ ಆಗಿವೆ?

ಆ) ದಕ್ಷಿಣ ಕನ್ನಡ ಜಿಲ್ಲೆ ಆ ಯೋಜನೆಗೆ ಸೇರಿದೆಯೇ?

ಇ) ಸೇರದಿದ್ದಲ್ಲಿ ಆ ಜಿಲ್ಲೆಯಲ್ಲಿ ಈ ಕುರಿತು ಸಮಿತಿಗಳನ್ನು ರಚಿಸುತ್ತಿರಲು ಕಾರಣವೇನು?

ಈ) ಆ ಯೋಜನೆಯಲ್ಲಿ ಜಿಲ್ಲಾವಾರು ಮಂಜೂರಾಗಿರುವ ಹಾಗೂ ಖರ್ಚಾಗಿರುವ ಹಣ ವೆಷ್ಟು? (ಪೂರ್ಣ ವಿವರ ನೀಡುವುದು)

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ಮೊದಲ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮಾತ್ರ ಸೇರಿಸಲಾಗಿದೆ. ಎರಡನೇ ಹಂತಕ್ಕೆ ಇನ್ನೂ ಜಿಲ್ಲೆಯನ್ನು ಆಯ್ಕೆ ಮಾಡಿಲ್ಲ.